ರುದ್ರನೀಲ ಥಾಪಸೆಯೂ ಮಾತು ಜೋಡಿಸಿ ಕೇಳಿದ. ಎರಡಕ್ಕೂ ಒಂದೇ ಉತ್ತರವೆನ್ನುವ ಒಡಪಿನ ಹಾಗೆ, ಶರಣಪ್ಪ ಹೇಳಿದ: 'ಅದಕ್ಕೇ ನೀಲ್ ಸಾರ್ ನಿಮ್ಮನ್ನ ಕರೆಸಿದ್ದು... ಡೇವಿಡ್ ಸಾರೇ ರಾತ್ರಿ ಇದ್ದಕ್ಕಿದ್ದ ಹಾಗೆ ನನ್ನನ್ನು ಬಂದೆಬ್ಬಿಸಿ, ಶರಣ್... ನನ್ನನ್ನು ಯಾರೋ ಕರೀತಿದ್ದಾರೆ... ಹೊರಡಲೇಬೇಕು ಅಂತಂದರು. ಆಶ್ಚರ್ಯ ಆಯಿತು. ಎಲ್ಲಿಗೆ ಸಾರ್... ಅದೂ ಈ ಹೊತ್ತಿನಲ್ಲಿ ಅಂತ ಕೇಳಿದೆ... ಏನೂ ಇಲ್ಲದಲ್ಲಿಗೆ ಅಂತಂದರು... ನನಗೆ ತಲೆಬುಡ ತಿಳೀದಾಯ್ತು. ಅವರಂದಿದ್ದೇನು ಅಂತ ಸೋಜಿಗವಾಯಿತು. ಅವರು ಸುಮ್ಮನೆ ನಕ್ಕು, ಒಂದು ಚೀಟಿ ಕೊಟ್ಟು ಇದನ್ನಿಟ್ಟುಕೋ... ನಿಂಗೆ ನೀಲ್ ಸಾರ್ ಗೊತ್ತಲ್ಲ, ಬೆಳಿಗ್ಗೆ ಏಳುತ್ತಲೇ ಅವರಿಗೆ ಫೋನು ಮಾಡಬೇಕಾಗಬಹುದು ಅಂತಂದರು... ಯಾವ ನೀಲ್ ಸಾರ್ ಅಂತಂದೆ. ಫಕ್ಕನೆ ಅದು ನೀವ್ಹೂಂತ ಹೊಳೀಲಿಲ್ಲ... ಅದೇ ಈ ಮನೆ ಕಟ್ಟುಸಿಕೊಟ್ಟರಲ್ಲ ಅವರು ಅಂತಂದರು. ರೇಣು ಮೇಡಂ, ಡೇವಿಡ್ ಸಾರ್ ನಿಮ್ಮನ್ನೂ ಸಹ ನೆನೆಸಿಕೊಂಡರು...'

ಈಗಲಾದರೂ, ರುದ್ರನೀಲ ಥಾಪಸೆಯ ಎದೆ ಮಿಡಿತವು ಕಿವಿಯ ಮಟ್ಟಕ್ಕು ಬಾಯೇರಿಸಿಕೊಂಡು ಕೇಳಿಸಿತು. ಏನನ್ನುವುದು ಇದನ್ನು? ಇದೇನು ಕಾಕತಾಳೀಯವೆ? ಇಪ್ಪತ್ತೊಂದನೇ ಶತಮಾನದ ಏಳನೇ ಇಸವಿಯಲ್ಲೂ ಆಗಬಲ್ಲ ಬಲು ಮುಂದುವರೆದ ಪವಾಡವೆ? ಎಲ್ಲಕ್ಕಿಂತ, ಶರಣಪ್ಪ ಹೇಳಿದ ಮಾತೇ ತನ್ನಲ್ಲೂ ಹೊಳೆದು 'ಏನೂ ಇಲ್ಲದಲ್ಲಿಗೆ' ಹೋಗುವ ಮತ್ತು ಸಾಗುವ ಕುರಿತಾಗಿ ತುಡಿಯುವುದೆ? 'ಹಾಗೆಂದರೇನೆಂದು ನೀನೂ ಬಂದು ತಿಳಿಯಬಹುದು... ಸಾಧ್ಯವಾದರೆ ನನಗೂ ತಿಳಿಹೇಳಬಹುದು...' ದೇವರೇ... ಇದೇನು ಕತೆಯೇ? ಹಕೀಕತೆ? ಇದನ್ನು ಬರೆದೊರೆಯಲು ಎಷ್ಟು ಆಶ್ಚರ್ಯಚಕಿತ ಚಿಹ್ನೆಗಳನ್ನಿಕ್ಕಬೇಕಾಗುವುದು ವಾಕ್ಯದಲ್ಲಿ? ಮತ್ತು ಭಾಷೆಯಲ್ಲಿ?! ಹೀಗೆಲ್ಲ ಯೋಚನೆಯಲ್ಲಿ ತೊಡಗಿದ ರುದ್ರನೀಲ ಥಾಪಸೆ ತನ್ನೊಳಗೇ ಜೀಕಿ ತುಯ್ಯತೊಡಗಿದ. ನಿಂತಲ್ಲೇ ಕಲ್ಲಾಗಿ ನಿಂತುಹೋದ. ಮಾತು ಸೋತುಕೊಂಡು ಮತ್ತು ಮೌನ ಬಾತುಕೊಂಡುಳಿದ! ಉಳಿದು ಕಾಡಿದ್ದು ಕಟ್ಟಚ್ಚರಿಯ ಕಿಚ್ಚು ಮಾತ್ರ!!

**'ಹಲೋ... ಕಾಲಿಂಗ್ ಫ್ರಮ್ ಬ್ಯಾಂಗಲೋರ್...' ಅಂತಂದು, ರುದ್ರನೀಲ ಥಾಪಸೆ ನಿಧಾನವಾಗಿ ಮಾತಿಗಿಳಿದ. ಅವನು ಥಾಮಸ್ ಆರ್ಥರ್ ಹ್ಯೂಸ್ ಡೇವಿಡ್ ಹ್ಯೂಸ್‌ನ ಮಗನೇ ಹೌದಾಗಿದ್ದ. ಆತ ವಿಷಯ ತಿಳಿದಿದ್ದೇ ತನಗೂ, ತನ್ನ ಕುಟುಂಬಕ್ಕೂ, ಸತ್ತ ಈ ಮನುಷ್ಯನಿಗೂ ಯಾವುದೇ ಸಂಬಂಧವಿಲ್ಲವೆಂದು, ಕಟು ನಿಷ್ಠುರವಾಗಿ ಆಡಿಬಿಟ್ಟ!**

ರೇಣುಯುಕ್ತಿಯಾದರೂ ಯಾವೊತ್ತಿಗೂ ವಾಸ್ತವದಲ್ಲಿ ಬದುಕುವವಳು. ಗಂಡನೆಂಬ ಗಂಡನ ಭಾವುಕತೆಯನ್ನು ಮೀರಿ ಬದುಕು ಕಟ್ಟಿದವಳು. ಈ ಹೊತ್ತಿನಲ್ಲೂ ಕೂಡಲೆ ವಾಸ್ತವಕ್ಕಿಳಿದು, ಮುಂದೇನೆಂಬ ಕುರಿತಾಗಿ ಸನ್ನದ್ಧಗೊಂಡಳು. 'ಬಡಾನೀಲ್... ನಿಮ್ಮ ಆಶ್ಚರ್ಯ ಎಲ್ಲ ಆಮೇಲಿಕ್ಕಿರಲಿ... ಈಗ ಮುಂದೇನು ಮಾಡಬೇಕು ಅನ್ನೋ ಬಗ್ಗೆ ಯೋಚನೆ